ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 09.01.2024.

<u>**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ವಕೀಲರಿಂದಃ**</u>

ಸರ್ವೆ ನಂ.220 ರಲ್ಲಿ 2 ಎಕರೆ 10 ಗುಂಟೆ ಜಮೀನನ್ನು ಗುರುನಾಥ ತಂದೆ ಸದಾಶಿವ ಜ್ಯೊಶಿ ರವರು 3 ನೇ ಪ್ರತಿವಾದಿಗೆ ದಿಃ 16.11.1991 ರಂದು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಾರಾಟ ಮಾಡಿದ ನಂತರ ಮುನಿಸಿ ಪಾರ್ಟಿ ರವರು ಸದರಿ ಜಮೀನಿನ ಕಬ್ಜೆಯನ್ನು ಕೂಡಾ ತೆಗೆದುಕೊಂಡು ಪಹಣಿಗಳಲ್ಲಿ ತಮ್ಮ ಹೆಸರನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ.220 ರಲ್ಲಿ 2 ಎಕರೆ 30 ಗುಂಟೆ ಜಮೀನನ್ನು ರಘುನಾಥ ಅಲಿಯಾಸ್ ಉದಯ ಸಕರಾಮ ಜ್ಯೊಶಿ ರವರು ದಿಃ 21.11.1991 ರಂದು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಮಾರಾಟ ಮಾಡಿದ ನಂತರ ಮುನಿಸಿ ಪಾರ್ಟಿ ರವರು ಸದರಿ ಜಮೀನಿನ ಕಬ್ಜೆಯನ್ನು ಕೂಡಾ ತೆಗೆದುಕೊಂಡು ಪಹಣಿಗಳಲ್ಲಿ ತಮ್ಮ ಹೆಸರನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿ.

ಸದರಿ 2 ಎಕರೆ 10 ಗುಂಟೆ ಮತ್ತು 2 ಎಕರೆ 30 ಗುಂಟೆ ಜಮೀನನ್ನು 3 ನೇ ಪ್ರತಿವಾದಿಯವರು ದುರ್ಬಲ ವರ್ಗದವರಿಗೆ ವಸತಿ ಸಲುವಾಗಿ ಸ್ವಾಧಿಪಡಿಸಿಕೊಂಡ ಜಮೀನು ಆಗಿರುತ್ತದೆ ಎಂದರೆ ಸರಿ. ಸದರಿ ಮೇಲೆ ಹೇಳಿದ ಜಮೀನುಗಳಲ್ಲಿ ಆಶ್ರಯ ಕಾಲೋನಿ ಕೂಡಾ ನಿರ್ಮಾಣವಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಹಿಸ್ಸೆ ಬೇರೆ ನಮ್ಮ ಹಿಸ್ಸೆ ಬೇರೆ ಎಂದು ನುಡಿಯುತ್ತಾರೆ. ಸರ್ವೆ ನಂ.220 ರಲ್ಲಿ ಸರ್ಕಾರಿ ಶಾಲೆ ಸಲುವಾಗಿ 100 X 100 ಅಡಿ ವಿಸ್ತೀರ್ಣದ ಜಾಗವನ್ನು ಮಂಜೂರು ಮಾಡಿದ್ದು, ಅದರಲ್ಲಿ ಕಟ್ಟಡ ಕೂಡಾ ನಿರ್ಮಾಣವಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂ.220 ರಲ್ಲಿ ಅರಣ್ಯ

ಇಲಾಖೆ ಕಛೇರಿ ಮತ್ತು ವಸತಿ ನಿಲಯಗಳಿಗೆ ಸ್ವಲ್ಪ ಜಾಗ ಮಂಜೂರಿ ಮಾಡಿರುತ್ತಾರೆ ಎಂದರೆ ಸರಿ. ಅರಣ್ಯ ಇಲಾಖೆ ಕಛೇರಿ ರವರು ಮತ್ತು ಮುನಿಸಿ ಪಾರ್ಟಿ ರವರು ತಮ್ಮ-ತಮ್ಮ ಜಾಗಗಳಿಗೆ ಕಾಂಪೌಂಡ್ ನಿರ್ಮಿಸಿಕೊಂಡಿರುತ್ತಾರೆ ಎಂದರೆ ಸರಿ. ಮುನಿಸಿ ಪಾರ್ಟಿ ಕಾಂಪೌಂಡ್ ಒಳಗಡೆ ನೀರು ಶುದ್ಧಿ ಕರಣ ಘಟಕ ಮತ್ತು ಸಂಪ್ ಇರುತ್ತದೆ ಎಂದರೆ ಸರಿ. ಅದೇ ರೀತಿ ಮುನಿಸಿ ಪಾರ್ಟಿ ಜಾಗದಲ್ಲಿ ಅಂಗನವಾಡಿ ಕೇಂದ್ರಕ್ಕೆ ಜಾಗ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಗುರುನಾಥ ಜ್ಯೂಶಿ ರವರು 1 ರಿಂದ 3 ನೇ ಪ್ರತಿವಾದಿಯರ ಮೇಲೆ ಹಾಗೂ Z.P. ಕಲಬುರಗಿ ರವರ ಮೇಲೆ ದಾವೆ ಹಾಕಿದ್ದರು ಎಂದರೆ ಸರಿ. ಅದೇ ರೀತಿ ಅಲ್ಲಿ ಯಾವುದೇ ಕಟ್ಟಡ ಕಟ್ಟಬಾರದು ಎಂದು ತಡೆಯಾಜ್ಞೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಪುರಸಭೆ ರವರು ಹಾಜರಾದ ನಂತರ ತಡೆಯಾಜ್ಞೆ ತೆರವುಗೊಳಿಸಿ ದಾವೆ ವಜಾಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಡಿಡಿಎಲ್‌ಆರ್ ಕಛೇರಿ ಮುಂದೆ 6 ಎಕರೆ 22 ಗುಂಟೆಯ ಫಾರಂ ನಂ.10, ಆಕಾರ್‌ಬಂದ್ ಮತ್ತು ನಕಾಶೆ ನನಗೆ ಗೊತ್ತಿರದೇ ಆಗಿರುತ್ತದೆ ಅಂತ ಅಪೀಲು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ತದನಂತರ ಡಿಡಿಎಲ್‌ಆರ್ ಕಛೇರಿ ರವರು ಅರ್ಜಿ ಪರಿಶೀಲಿಸಿ ವಾದಿ ಹಾಕಿದ ಅಪೀಲನ್ನು ವಜಾಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಗುರುನಾಥ ಜ್ಯೊಶಿ ರವರು ವಾದಿಗೆ ಮಾಡಿಕೊಟ್ಟ ಜಮೀನಿನ ಕಬ್ಜೆಯಲ್ಲಿಯೇ ಇರಲಿಲ್ಲ ಎಂದು ಡಿಡಿಎಲ್‌ಆರ್ ರವರು ತೀರ್ಪು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2003-04 ರಲ್ಲಿ ಗುರುನಾಥ ಜ್ಯೂಶಿ ರವರು ಸರ್ವೆ ನಂ.220 ರ ಕಬ್ಜೆಯಲ್ಲಿ ಇರುವುದಿಲ್ಲ

ಎಂದು ಒಪ್ಪಿಗೆ ಕೊಟ್ಟು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಒಪ್ಪಿಗೆ ಕೊಟ್ಟ ನಂತರ ಗುರುನಾಥ ಜ್ಯೋತಿ ರವರ ಹೆಸರಿನಲ್ಲಿ ಇದ್ದ ಪಹಣಿ ಡಿಲಿಟ್ ಆಗಿದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.220/4 ರಲ್ಲಿ ಭೋಜು ತಂದೆ ಹೊಬ್ಬು ರವರು ಕಬ್ಜೆಯಲ್ಲಿ ಇರುತ್ತರೆ ಎಂದು ಫಾರಂ ನಂ.10 ತಯಾರು ಆಗಿದೆ ಎಂದರೆ ಸರಿಯಲ್ಲ. ಅದೇ ರೀತಿ ಫಾರಂ ನಂ.10 ರಲ್ಲಿ 1 ಎಕರೆ 4 ಗುಂಟೆ ಜಮೀನಿನಲ್ಲಿ ಭೋಜು ತಂದೆ ಹೊಬ್ಬು ರವರು ಕಬ್ಜೆಯಲ್ಲಿ ಇರುತ್ತಾರೆ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ವಾದಿ ಸದರಿ ಭೋಜು ತಂದೆ ಹೊಬ್ಬು ಮತ್ತು ಈ ಕೇಸಿನ ಪ್ರತಿವಾದಿಗಳ ವಿರುದ್ಧ ಡಿಡಿಎಲ್ಆರ್ ಕಛೇರಿಯಲ್ಲಿ ಅಪೀಲು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ವಾದಿ ಖರೀದಿಸಿರುವ ಜಮೀನಿನಲ್ಲಿ ಅವರು ಯಾವತ್ತು ಕಬ್ಜೆಯಲ್ಲ ಎಂದರೆ ಸರಿಯಲ್ಲ. ನಾನು ವಾದಿ ಖರೀದಿಸಿರುವ ಜಮೀನಿನ ಚೆಕ್‌ಬಂದಿಗಳು ಸರಿ ಇರುತ್ತವೆ ಎಂದು ಕ್ರಯ ಪತ್ರ ಬಿಟ್ಟು ಬೇರೆ ಯಾವುದೇ ದಾಖಲಾತಿಗಳನ್ನು ನೋಡಿಲ್ಲ. ವಾದಿ ಕ್ರಯ ಪತ್ರ ಮಾಡಿಕೊಳ್ಳುವ ಕಾಲಕ್ಕೆ ಸರ್ವೆ ನಂ.220/4 ರಲ್ಲಿ ಒಟ್ಟು 6 ಎಕರೆ 22 ಗುಂಟೆ ಜಮೀನು ಇರಲಿಲ್ಲ, ಅದು 1 ಎಕರೆ 4 ಗುಂಟೆ ಜಮೀನು ಇತ್ತು ಅದು ಕೂಡಾ ಭೋಜು ತಂದೆ ಹೊಬ್ಬು ರವರು ಕಬ್ಜೆಯಲ್ಲಿ ಇತ್ತು ಎಂದರೆ ಸರಿಯಲ್ಲ. ವಾದಿ ಕ್ರಯಕ್ಕೆ ಪಡೆದ ದಿನಾಂಕದಂದು ರೆವಿನ್ಯೂ ದಾಖಲಾತಿಗಳ ಹೊಂದಾಣಿಕೆ ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.220 ರಲ್ಲಿ ಯಾರು-ಯಾರು ಎಷ್ಟು-ಎಷ್ಟು ಕಬ್ಜೆಯಲ್ಲಿ ಇರುತ್ತಾರೆ ಎಂದು ನಾನು ದಾಖಲೆ ನೋಡಿಲ್ಲ.

ನಿಪಿ-5 ರಲ್ಲಿ ಎಲ್ಲಿಯು ಕೂಡಾ ಪುರಸಭೆ ಜಾಗ ಬರುತ್ತದೆ ಎಂದು ಚೆಕ್‌ಬಂದಿಯಲ್ಲಿ ತೋರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-5 ರಲ್ಲಿ ತೋರಿಸಿದ ಜಮೀನಿನ ಚೆಕ್‌ಬಂದಿಯಲ್ಲಿ

ತೋರಿಸಿದ ಮಾಲಿಕರು ಮಾತ್ರ ಅತೀಕ್ರಮಣ ಮಾಡಲು ಸಾಧ್ಯ, ಬೇರೆಯವರು ಅತೀಕ್ರಮಣ ಮಾಡಲು ಬರುವುದಿಲ್ಲ ಎಂದರೆ ಸರಿ. ವಾದಿ ತಾನು ಕ್ರಯಕ್ಕೆ ಪಡೆದ ಸ್ವತ್ತಿನ ಸರ್ವೆ ಮಾಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ತಾನು ಕ್ರಯಕ್ಕೆ ಪಡೆದ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ನನ್ನ ಸಮಕ್ಷಮ ಅಳತೆ ಮಾಡಿಸಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಗುರುನಾಥ ಜ್ಯೋಶಿ ರವರು 6 ಎಕರೆ 22 ಗುಂಟೆ ಜಮೀನನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಮತ್ತು ಕಬ್ಜೆಯನ್ನು ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಗುರುನಾಥ ಜ್ಯೋಶಿ ರವರು ತಮ್ಮ ಹೆಸರಿನಲ್ಲಿದ್ದ ಡಿಲಿಟ್ ಆದರೂ ಕೂಡಾ ತಹಶಿಲ್ದಾರ ಹಿಡಿದುಕೊಂಡು ಪುನಃ ತನ್ನ ಹೆಸರಿನಲ್ಲಿ ದಾಖಲೆಗಳನ್ನು ಸೃಷ್ಠಿಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಖರೀದಿಸಿರುತ್ತಾನೆ ಎಂದು ಹೇಳಲಾದ ಸ್ವತ್ತು ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ಕೂಡಾ ನಾವುಗಳೆಲ್ಲ ಕೂಡಿಕೊಂಡು ಒಂದು ಸುಳ್ಳು ಪಹಣಿ ಸೃಷ್ಠಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುರುನಾಥ ಜ್ಯೋಶಿ ರವರು ದಾವಾ ಸ್ವತ್ತಿನ ಮಾಲಿಕನು ಮತ್ತು ಕಬ್ಜೆದಾರನು ಎಂದೂ ಇರಲಿಲ್ಲ, ಆ ಕಾರಣ ಆತನು ವಾದಿಗೆ ಮಾರಾಟ ಮಾಡುವ ಯಾವುದೇ ಹಕ್ಕು ಹಿತಾಸಕ್ತಿ ಸ್ವಾಧಿನ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನ ಮಾಲಿಕನು ಮತ್ತು ಕಬ್ಜೆದಾರನು ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ವಾದಿ ಕೂಡಿ ತಪ್ಪು ಸ್ವಾಧಿನ, ತಪ್ಪು ಸರ್ವೆ ನಂಬರ, ತಪ್ಪು ಚತುರ್ ಸೀಮೆ ತೋರಿಸಿ ಸುಳ್ಳು ಕ್ರಯ ಪತ್ರ ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ

ನನ್ನ ಸ್ನೇಹಿತನಾಗಿರುವ ಕಾರಣ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 1 ಮತ್ತು 2 ನೇ ಪ್ರತಿವಾದಿಗಳ ಪರ ವಕೀಲರಿಂದಃ

1 ಮತ್ತು 2 ನೇ ಪ್ರತಿವಾದಿಗಳ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**